**ದಿನಾಂಕ 02.05.2026 ರಂದು** ವಿ.ಸಿ ಮುಖಾಂತರ **ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಜಿ ಎಸ್ ಎಮ್ ರವರಿಂದ ವಿ.ಸಿ ಮುಖಾಂತರಃ**

10. ನಿಪಿ–8 ದೂರನ್ನು ಠಾಣೆಯಲ್ಲಿ ತಯಾರಿಸಿಲಾಗಿದೆ. ಸದರಿ ದೂರನ್ನು ನನ್ನ ಉಕ್ತಲೇಖನದ ಮೇರೆಗೆ ನಮ್ಮ ಸಿಬ್ಬಂದಿ ಟೈಪ್ ಮಾಡಿ ಪ್ರಿಂಟ್ ತೆಗೆದಿರುತ್ತಾರೆ. ಪ್ರ.ವ.ವ ನ ಕಾಲಂ ನಂ.12 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. SHO ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು SH ಡೈರಿ ಇರುವುದಾಗಿ ನುಡಿಯುತ್ತಾರೆ. ಅದನ್ನು ಏಕೆ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ತನಿಖಾಧಿಕಾರಿಯವರು ಹಾಜರು ಪಡಿಸಬೇಕು ಎನ್ನುತ್ತಾರೆ.

11. ಪಂಚರಾದ ಚಾಸಾ–3 ಮತ್ತು ಫ್ರಾಸಾ–3 ರವರನ್ನು ನಾನು ದೂರವಾಣಿ ಮೂಲಕ ಸಂಪರ್ಕಿಸಿ ಠಾಣೆಗೆ ಬರ ಮಾಡಿಕೊಂಡಿರುತ್ತೇನೆ. ನಾನು ಕರೆ ಮಾಡಿದಾಗ ಸದರಿ ಪಂಚರು ಚಿನ್ನಸಂದ್ರ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅಲ್ಲಿಂದ ಠಾಣೆಯ ಬರಲು ಸುಮಾರು 5 ನಿಮಿಷಗಳ ಕಾಲ ಕಾಲವಕಾಶ ಬೇಕಾಗುತ್ತದೆ. ನಿಪಿ–1 ನೋಟಿಸ್ ಗಳನ್ನು ನಮ್ಮ ಠಾಣೆಯಲ್ಲಿ ತಯಾರಿಸಲಾಗಿರುತ್ತದೆ. ನಿಪಿ–1 ನೊಟೀಸ್ ಗಳಲ್ಲಿ ಪಂಚರಾದ ಚಾಸಾ–3 ಮತ್ತು ಫ್ರಾಸಾ–3 ರವರ ಹೆಸರುಗಳನ್ನು ಕೈಯಲ್ಲಿ ಬರೆಯಲಾಗಿದೆ ಎಂದರೆ ಸಾಕ್ಷಿಯು ನೋಟಿಸ್ ಫಾರ್ಮೆಟ್ ಅನ್ನು ಪ್ರಿಂಟೌಟ್ ತೆಗೆದು ಅದನ್ನು ಜಾರಿ ಮಾಡುವ ಕಾಲಕ್ಕೆ ಪಂಚರ ಹೆಸರುಗಳನ್ನು ಕೈಯಲ್ಲಿ ಬರೆದಿರುವುದಾಗಿ ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಗುಪ್ತ ಮಾಹಿತಿ ಮಃ1.30 ಕ್ಕೆ ಬಂದಿರುವುದಾಗಿ ಸಾಕ್ಷ್ಯ ನುಡಿದಿದ್ದು, ನಿಪಿ–1 ರ ನೋಟಿಸ್ ಗಳನ್ನು ಮಃ1.00 ಗಂಟೆಗೆ ಜಾರಿ ಮಾಡಿದ್ದು, ಈ ಬಗ್ಗೆ ಏನು ಹೇಳುವಿರಿ ಎಂಬ ಪ್ರಶ್ನೆಗೆ ಸಾಕ್ಷಿಯು ಕಣ್ಣ–ತಪ್ಪಿನಿಂದ ನಮೂದಿಸಿರುವುದಾಗಿ

2/5

ನುಡಿಯುತ್ತಾರೆ. ನಿಪಿ-1 ನೋಟಿಸ್ ಗಳನ್ನು ಆನಂತರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

12. ದಾಳಿ ಮಾಡುವ ಬಗ್ಗೆ ಮೇಲಾಧಿಕಾರಿಗಳಿಗೆ ದೂರವಾಣಿ ಮುಖಾಂತರ ಮಾಹಿತಿಯನ್ನು ನೀಡಿರುತ್ತೇನೆ. ನಿಪಿ-5 ಮಹಜರ್ ಅನ್ನು ಸ್ಥಳದಲ್ಲಿ ನಮ್ಮ ಸಿಬ್ಬಂದಿ ವೆಂಕಟರವಣಪ್ಪ ಮೂಲಕ ಟೈಪ್ ಮಾಡಿಸಿ, ಅಲ್ಲಿಯೇ ಪ್ರಿಂಟೌಟ್ ತೆಗೆಸಿರುತ್ತೇನೆ. ಪ್ರಿಂಟರ್ ಹೆಸರನ್ನು ಹೇಳಲು ಸಾಧ್ಯವಿಲ್ಲ. ಟೈಪ್ ಮಾಡಿ, ಪ್ರಿಂಟೌಟ್ ತೆಗೆದ ಸಿಬ್ಬಂದಿ ಪಂಚನಾಮೆಯಲ್ಲಿ ಸಹಿ ಮಾಡಿಲ್ಲ ಎಂದರೆ ಸರಿ. ನಾನು ಠಾಣಾ ಸಿಬ್ಬಂದಿಗೆ ದಾಳಿಗೆ ಹೋಗಲು ನೋಟಿಸ್ ನೀಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಸುಮಾರು 10 ನಿಮಿಷಗಳ ಕಾಲ ಮರೆಯಲ್ಲಿ ನಿಂತು ನೋಡಿರುತ್ತೇವೆ. ಆದರೆ ಸದರಿ ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲ.

13. ಗೆಜೆಟೆಡ್ ಅಧಿಕಾರಿಯಾದ ಫ್ರಾಸಾ-2 ರವರಿಗೆ ದೂರವಣಿ ಮೂಲಕ ಮಾಹಿತಿ ನೀಡಿಲಾಗಿತ್ತು. ಫ್ರಾಸಾ-2 ರವರು ಮಾಹಿತಿ ನೀಡಿದಾಗ ಕೈವಾರದಲ್ಲಿದ್ದು, ಅಲ್ಲಿಂದ ಘಟನಾ ಸ್ಥಳಕ್ಕೆ ಬರಲು ಸುಮಾರು 10 ನಿಮಿಷ ಕಾಲವಕಾಶ ತೆಗೆದುಕೊಂಡಿರಬಹುದು. ಫ್ರಾಸಾ-2 ರವರಿಗೆ ನಿಪಿ-3 ರ ನೋಟಿಸ್ ಅನ್ನು ಠಾಣೆಯಲ್ಲಿ ಜಾರಿ ಮಾಡಲಾಗಿದೆ ಎಂದರೆ ಸಾಕ್ಷಿಯು ಘಟನಾ ಸ್ಥಳದಲ್ಲಿ ಜಾರಿ ಮಾಡಲಾಗಿದೆ ಎನ್ನುತ್ತಾರೆ. ಘಟನಾ ಸ್ಥಳದಲ್ಲಿ ಹಾಜರಿದ್ದ ಗೆಜೆಟೆಡ್ ಅಧಿಕಾರಿಯನ್ನು ಕರೆಸಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ಪರಿಶೀಲಿಸಿಲ್ಲ ಎನ್ನುತ್ತಾರೆ.

14. ನಿಪಿ-6 ರ 3 ಮತ್ತು 4 ನೇ ಫೋಟೋಗಳಲ್ಲಿ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಕಂಡು ಬರುತ್ತಿದೆ ಎಂದರೆ ಸರಿ. ಸದರಿ ಬಂಕ್ ನಿಂದ ಪಂಚರನ್ನು ಕರೆಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿಯನ್ನು ಅರೆಸ್ಟ್ ಮಾಡಿಲ್ಲ, ಆತನಿಂದ ಯಾವುದೇ ಗಾಂಜಾವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಮಾಲು ಹಾಗೂ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದರೆ

ಸರಿಯಲ್ಲ. ನೋಟಿಸ್ ಗಳನ್ನು, ಪಂಚನಾಮೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಅಂಗ ಶೋಧನೆ ನೋಟಿಸ್ ಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಫ್ರಾಸಾ–2 ರವರು ನೀಡಿರುವ ನಿಪಿ–4 ರ ಅಂಗ ಶೋಧನೆ ನೋಟಿಸ್ ಗಳಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿ. ಆರೋಪಿಗೆ ಕನ್ನಡ ಬರುವುದಿಲ್ಲ , ಆತ ತೆಲಗು ಭಾಷಿಕ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

2/5/26

**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.